SC:75/2017
PW:02 CW:08

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 75/2017

| | |
|---|---|
| PW | 02 |
| CW | 08 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 03.07.2026.

| | | |
|---|---|---|
| ಸಾಕ್ಷಿಯ ಹೆಸರು | : | ರಮೇಶ್ |
| ತಂದೆಯ ಹೆಸರು | : | ಗಣೇಶ್ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಪೆಟ್ರೋಲ್ ಬಂಕ್ ನಲ್ಲಿ ಕೆಲಸ |
| ವಾಸಸ್ಥಳ | : | ಬಾಗೇಪಲ್ಲಿ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ'**

ಈಗ ನನಗೆ ತೋರಿಸುತ್ತಿರುವ ನಿಪಿ.3 ರಲ್ಲಿರುವ ಸಹಿ ನನ್ನದೇ ಇದ್ದು ಸಾಕ್ಷಿಯು ಗುರುತಿಸಿದ ನಿಪಿ.3 ಪಂಚನಾಮೆಯಲ್ಲಿರುವ ಸಹಿಯನ್ನು **ನಿಪಿ.3 (ಬಿ)** ಎಂದು ಗುರುತಿಸಲಾಯಿತು. ನನಗೆ ಚಾಸಾ.1 ಮತ್ತು 9 ರವರು ಗೊತ್ತಿರುವುದಿಲ್ಲ . ಸುಮಾರು 10 ವರ್ಷಗಳ ಹಿಂದೆ ನಿಪಿ.3 ಕ್ಕೆ ಪೆರೇಸಂದ್ರದಿಂದ ನಾನು ಬರುತ್ತಿದ್ದಾಗ ಸಹಿ ಮಾಡಿರುತ್ತೇನೆ . ನಿಪಿ.3 ರಲ್ಲಿ ಏನು ಬರೆದಿದೆ ಎಂದು ಗೊತ್ತಿರುವುದಿಲ್ಲ . ನನ್ನ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿ ಯಾವುದೇ ವಾಹನವನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ .

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

2. ದಿಃ 14.03.2017 ರಂದು ಪೆರೇಸಂದ್ರ ಪೊ.ಠಾಣೆಯ ಆವರಣದಲ್ಲಿ ಈ ಪ್ರಕರಣದ ಪಿರ್ಯಾದಿದಾರಾದ ಚಾಸಾ.1 ರವರು ನಮಗೆ ಹೇಳಿದ್ದೇನೆಂದರೆ ದಿಃ08.03.2017 ರಂದು ತಾನು ಬಾಗೇಪಲ್ಲಿ ತಾಲ್ಲೂಕು ಬಾಗೇಪಲ್ಲಿ ಟೌನ್ ನಲ್ಲಿ ಅಂಗಡಿ ವ್ಯಾಪಾರ ಮಾಡುವ ಸುಬ್ರಮಣಿ ಮತ್ತು ತ್ಯಾಗರಾಜ್ ರವರ ಅಂಗಡಿಗಳಿಗೆ ತಮಿಳುನಾಡಿದ ಕೊಯಮತ್ತೂರಿನಿಂದ ಬೆಲ್ಲವನ್ನು ಖರೀದಿಸಿಕೊಂಡು ಬರಲು ಒಟ್ಟು 7 ಲಕ್ಷ 3 ಸಾವಿರ ದ ಒಂದು ನೂರು ರೂಪಾಯಿ ಹಣವನ್ನು ಮುಂಗಡವಾಗಿ ಪಡೆದುಕೊಂಡು ವಾಪಸ್ಸು ತಮಿಳುನಾಡಿಗೆ ಹೋಗಲು ಬಾಗೇಪಲ್ಲಿ ಬಸ್ ನಿಲ್ದಾಣದಲ್ಲಿ ಕೆಎ-25 ಎಫ್ 3087 ನಂಬರ್ ನ ಎನ್.ಇ ಕೆ.ಎಸ್.ಆರ್.ಟಿ.ಸಿ ಬಸ್ ನಲ್ಲಿ ಹತ್ತಿಕೊಂಡು ಬೆಂಗಳೂರಿಗೆ ಹೋಗುತ್ತಿದ್ದಾಗ ಪೆರೇಸಂದ್ರ ಗ್ರಾಮ ಬಿಟ್ಟ ನಂತರ ಏರು ಮುಖ ರಸ್ತೆ ಇದ್ದು ಆ ಸಮಯದಲ್ಲಿ ಬಸ್ ನಿಧಾನವಾಗಿ ಚಲಿಸುತ್ತಿದ್ದಾಗ ಬಸ್ ನಲ್ಲಿ ಇದ್ದ 4 ಜನ ಆರೋಪಿತರು ಕನ್ನಡ ಭಾಷೆ ಮಾತನಾಡುತ್ತಿದ್ದರು , ಜೆನ್ಸ್ ಪ್ಯಾಂಟ್ ಮತ್ತು ಶರ್ಟ್ ಧರಿಸಿದ್ದು ಏಕಾಏಕಿ ನನ್ನ ಬಳಿ ಬಂದು ಒಬ್ಬ ಚಾಕು ಮತ್ತು ಮಚ್ಚು ತೋರಿಸಿ ಉಳಿದ ಇಬ್ಬರು ನನ್ನ ಬಳಿ ಇದ್ದ ಹಣದ ಬ್ಯಾಂಕ್ ನ್ನು ಕಿತ್ತುಕೊಂಡಿದ್ದು ಅಷ್ಟರಲ್ಲಿ ಪ್ರಯಾಣಿಕರು ಕಿರುಚಿಕೊಂಡಾಗ ಬಸ್ ಡ್ರೈವರ್ ಬಸ್ ನ್ನು ನಿಲ್ಲಿಸಿದ್ದು ಅದೇ ಸಮಯಕ್ಕೆ ಸದರಿಯವರು ಬಸ್ ನಿಂದ ಇಳಿದು ಬಸ್‌ನ ಹಿಂಭಾಗದಲ್ಲಿ ಬರುತ್ತಿದ್ದ ಕೆ ಎ 05 ಎಂ 5812 ಕಾರಿನಲ್ಲಿ ಹತ್ತಿಕೊಂಡು ವೇಗವಾಗಿ ಚಾಲನೆ ಮಾಡಿಕೊಂಡು ಹೊರಟು ಹೋದರು ಎಂದು ಸದರಿ ಕಾರು ಇದೇ ಇರುತ್ತದೆ ಎಂದು ಪೊಲೀಸ್ ಠಾಣೆಯಲ್ಲಿ ತೋರಿಸಿದ್ದು ಸದರಿ ಕಾರನ್ನು ಪೊಲೀಸರು ನನ್ನ ಮತ್ತು ಚಾಸಾ.9 ರ ಸಮಕ್ಷಮ ನಿಪಿ.3 ಪಂಚನಾಮೆಯಲ್ಲಿ ನನ್ನ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ನನಗೆ ಪಂಚನಾಮೆಯನ್ನು ಓದಿ ಹೇಳಿದ್ದು ನಾನು ತಿಳಿದುಕೊಂಡು ಸಹಿ ಮಾಡಿದ್ದು ಎಲ್ಲಾ ವಿಷಯ

ಗೊತ್ತಿದ್ದರು ಸಹಾ ಈಗ ಆರೋಪಿತರಿಗೆ ಹೆದರಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ
.

**<u>ಪಾಟೀ ಸವಾಲುಃ 1, 3, 5 ಮತ್ತು 6 ಆರೋಪಿ ಪರ ವಕೀಲರಿಂದಃ</u>**

ಪಾಟೀ ಸವಾಲು ಏನೂ ಇಲ್ಲ ಎಂದು ತಿಳಿಸಿರುತ್ತಾರೆ .

**<u>ಮರುವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 03.07.2026 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

Sd/-
**(ಸಿದ್ದಣ್ಣ.ಬಿ.ಹಂದ್ರಾಳ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.